ಗಳ ಸಂಖ್ಯೆ ಎಷ್ಟು ;

ಆ) ಕಾನೂನನ್ನು ಬಿಗಿಗೊಳಿಸಿ ಈ ಅಪರಾಧಗಳನ್ನು ತಡೆಹಿಡಿಯಲು ಸರ್ಕಾರದವರು ಕ್ರಮ ಕೈಗೊಳ್ಳುವರೆ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು) :—

ಅ) ಕ್ರ. ಸಂ.	ಅಪರಾಧಗಳು	1980	1981	1982	1983 (ಜುಲೈ ತಿಂಗಳ ಕೊನೆಯವರೆಗೆ)
1.	ಕೊಲೆಗಳು	871	942	886	581
2.	ಡಕಾಯಿತಿಗಳು	265	231	171	103
3.	ಇತರ ಭಾರತೀಯ ದಂಡ ಸಂಹಿತೆಯ ಪ್ರಕಾರ ಗುನ್ನೆಗಳು	77682	78432	73422	43161
	ಒಟ್ಟು	78818	79605	74479	43845
4.	ಮತೀಯ ಗಲಭೆಗಳು				
	1) ಗುರುತರವಾದವುಗಳು	13	9	26	61
	2) ಚಿಕ್ಕಪುಟ್ಟವುಗಳು	25	30	83	52
	ಒಟ್ಟು	38	39	109	58

ಆ) ಅಸ್ತಿತ್ವದಲ್ಲಿರುವ ಕಾನೂನುಗಳು ಸಾಮಾನ್ಯ ಪರಿಸ್ಥಿತಿಯಲ್ಲಿ ಅಪರಾಧಗಳನ್ನು ತಡೆ ಹಿಡಿಯಲು ಸಾಕು. ಅವುಗಳನ್ನು ಕಟ್ಟುನಿಟ್ಟಾಗಿ ಜಾರಿಯಲ್ಲಿ ತರುವಂತೆ ಸೂಕ್ತ ವ್ಯವಸ್ಥೆ ಮಾಡಲಾಗಿದೆ. ಆದರೆ ಕೆಲವು ಅಪರಾಧಗಳನ್ನು ಪರಿಣಾಮಕಾರಿಯಾಗಿ ಹತ್ತಿಕ್ಕಲು ಮತ್ತು ಅಪರಾಧಿಗಳನ್ನು ದಂಡಿಸುವುದಕ್ಕೆ ವಿಶೇಷವಾದ ಕಾನೂನಿನ ಅಗತ್ಯವಿದೆ. ಕಳ್ಳ ಬಟ್ಟಿ ಸಾರಾಯಿ, ಜೂಜು, ಗುಂಡಾ ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಹತ್ತಿಕ್ಕಲು ಸರಕಾರವು ಹೊಸ ಶಾಸನಗಳನ್ನು ಜಾರಿಗೆ ತರಲು ಯೋಚಿಸುತ್ತಿದೆ.

Sri. B. Ganganna.—Sir, Sri Byrappaji has authorised me to put the question. Kindly permit me to put the question on behalf of him.

Mr. Deputy Speaker : Yes.

ಶ್ರೀ ಬಿ. ಗಂಗಣ್ಣ.—ಸ್ವಾಮಿ, 1983-84ನೇ ಸಾಲಿನಲ್ಲಿ ಮರ್ಡರ್, ಡಕಾಯಿಟ್ಸ್ ಮತ್ತು ಇತರೆ ಐಪಿಸಿ ಕೇಸಸ್ ಬಗ್ಗೆ ಬಿಗಿಯಾದ ಕಾರ್ಯಕ್ರಮಗಳನ್ನು ಕೈಗೊಂಡಿದ್ದಾರೆ ಅನ್ನುವುದು ಸಾರ್ವಜನಿಕರ ಗಮನಕ್ಕೆ ಬಂದಿರುವುದರಿಂದ, ಇನ್ನುಮುಂದೆ ಇನ್ನೂ ಬಿಗಿಯಾದ ಕಾರ್ಯಕ್ರಮಗಳನ್ನು ಕೈಗೊಳ್ಳುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.—ತಾವು ಹೇಳಿದಂತೆ ಆ ಕಾರ್ಯಕ್ರಮಗಳನ್ನು ನಿರಂತರವಾಗಿ ಇನ್ನೂ ಬಿಗಿಗೊಳಿಸಲಾಗುವುದು :—

ವಿಷಯ :--- ವಿದೇಶಿ ಕಾರುಗಳ ಖರೀದಿಯನ್ನು ತಡೆಗಟ್ಟುವುದು

ಪ್ರ. 110(59) ಶ್ರೀ ಎಂ. ಪುಟ್ಟಸ್ವಾಮಿ (ಕೃಷ್ಣರಾಜಪೇಟೆ).—ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :---

ಅ) ಸರಕಾರದ ಮಂಡಲಿಗಳಲ್ಲಿ ಹಾಗೂ ನಿಗಮಗಳಲ್ಲಿ ಇರುವ ವಿದೇಶೀ ಕಾರುಗಳ ಸಂಖ್ಯೆ ಎಷ್ಟು ? ಇವುಗಳಲ್ಲಿ ಉಪಯೋಗದಲ್ಲಿರುವ ಸಂಖ್ಯೆ ಎಷ್ಟು ;

ಆ) ಯಾವ ಯಾವ ಇಲಾಖೆಗಳು ಮಂಡಳಿಗಳು ನಿಗಮಗಳು ಈ ಕಾರುಗಳನ್ನು ಉಪಯೋಗಿಸುತ್ತಿವೆ ;

ಇ) ಸರಳತೆಯ ದೃಷ್ಟಿಯಿಂದ ಈ ವಿದೇಶಿಕಾರುಗಳ ಕೊಳ್ಳುವಿಕೆಯನ್ನು ತಡೆಹಿಡಿಯಲಾಗುವುದೇ ?

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿಗಳು) :—

ಅ) 12

ಹಟ್ಟಿ ಚಿನ್ನದ ಗಣಿಯ ಒಂದು ಕಾರು ಹೊರತು ಎಲ್ಲಾ ಉಪಯೋಗದಲ್ಲಿವೆ.

ಆ) ಕಾರುಗಳನ್ನು ಉಪಯೋಗಿಸುತ್ತಿರುವ ಇಲಾಖೆಗಳ ಮಂಡಳಿಗಳ ಹಾಗೂ ನಿಗಮಗಳ ಮಾಹಿತಿ ಈ ಕೆಳಗೆ ತೋರಿಸಿದೆ.

1.	ಮೈಸೂರು ಸೇಲ್ಸ್ ಇಂಟರ್‌ನ್ಯಾಷನಲ್ ಲಿಮಿಟೆಡ್	1
2.	ಮೈಸೂರ್ ಮಿನರಲ್ಸ್ ಲಿಮಿಟೆಡ್ :	1
3.	ದಿ ಹಟ್ಟಿ ಗೋಲ್ಡ್ ಮೈನ್ಸ್ ಕಂಪನಿ ಲಿಮಿಟೆಡ್	2
4.	ಮೈಸೂರ್ ಪೇಪರ್ ಮಿಲ್ಸ್ ಲಿಮಿಟೆಡ್ :	2
5.	ವಿಶ್ವೇಶ್ವರಯ್ಯ ಐರನ್ ಅಂಡ್ ಸ್ಟೀಲ್ ಲಿಮಿಟೆಡ್ :	2
6.	ಕರ್ನಾಟಕ ಪವರ್ ಕಾರ್ಪೊರೇಷನ್ ಲಿಮಿಟೆಡ್ :	1
7.	ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ಸಂಸ್ಥೆ :	1
8.	ಲೋಕೋಪಯೋಗಿ ಮತ್ತು ವಿದ್ಯುಚ್ಛಕ್ತಿ ಇಲಾಖೆ (ನೀರಾವರಿ) :	2

ಇ) ಸಲಹೆಯನ್ನು ಗಮನಿಸಲಾಗುವುದು. ಮತ್ತು ಈಗ ವಿದೇಶಿ ಕಾರುಗಳನ್ನು ಕೊಳ್ಳುವ ಯೋಜನೆ ಇಲ್ಲ.

ಶ್ರೀ ಎಂ. ಪುಟ್ಟಸ್ವಾಮಿ.—ಅಧ್ಯಕ್ಷರೇ, ಮೊದಲನೆಯದಾಗಿ ನಾನು ಕೇಳುವುದೇನೆಂದರೆ ಹಿಂದಿನ ಮಾನ್ಯ ಮುಖ್ಯಮಂತ್ರಿಗಳು ಉಪಯೋಗಿಸುತ್ತಿದ್ದ ವಿದೇಶಿ ಕಾರುಗಳ ಗತಿ ಈಗ ಏನಾಗಿದೆ ಸ್ವಾಮಿ ? ಎರಡನೆಯದಾಗಿ ಇಷ್ಟು ಅಪಾರ ಹಣ ವೆಚ್ಚ ಮಾಡಿ ದೇಶ ವಿದೇಶಗಳಿಂದ ಈ ಕಾರು ತರಿಸಿದರಲ್ಲಾ ಅವುಗಳ ಉಪಯೋಗ ಈಗ ಮಾಡದೇ ಹೋದರೆ ಅದನ್ನು ಆಗ ಉಪಯೋಗಿಸಿದ ಹಾಗೆ ಈಗಿನ ಮುಖ್ಯಮಂತ್ರಿಗಳು ಮಾಡಬೇಕೆಂದು ಸಾರ್ವಜನಿಕರಲ್ಲಿ ಒಂದು ಕೊರಗು ಇದೆ. ಅದನ್ನು ಮಾನ್ಯ ಮುಖ್ಯಮಂತ್ರಿಗಳು ಪರ್ಯಾಲೋಚಿಸುತ್ತಾರೆಯೇ ? ಮೂರನೆಯದಾಗಿ ಮಾನ್ಯ ಮುಖ್ಯಮಂತ್ರಿಗಳು ಮತ್ತು ಮಂತ್ರಿಗಳು ಈಗ ಏನು ಒಂದು ಸರಳತೆಯನ್ನು ಆಚರಿಸುತ್ತಿದ್ದಾರೋ ಅದೇ ರೀತಿಯಲ್ಲಿ ಉನ್ನತ ಅಧಿಕಾರಿಗಳ ಮೇಲೂ ಹೇರಿ ಇಂಥಾ ಒಂದು ಸರಳತೆಯನ್ನು ಆಚರಿಸುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ರಾಮಕೃಷ್ಣ ಹೆಗಡೆ.--- ಮಾನ್ಯ ಸದಸ್ಯರು, ಹಿಂದಿನ ಮುಖ್ಯಮಂತ್ರಿಗಳು ಉಪಯೋಗಿಸುತ್ತಿದ್ದ ಕಾರನ್ನು ಇಂದಿನ ಮುಖ್ಯಮಂತ್ರಿಗಳು ಉಪಯೋಗಿಸುತ್ತಿಲ್ಲವೆಂದು ಜನರಲ್ಲಿ ಕೊರಗು ಇದೆ ಎನ್ನುವ ಮಾತನ್ನು ಹೇಳಿದರು. ಆ ಕೊರಗು ನನ್ನ ಗಮನಕ್ಕೆ ಬಂದಿಲ್ಲ. ಅವರ ಮನಸ್ಸಿನಲ್ಲಿ ಏನಾದರೂ ಆ ಭಾವನೆ ಇದ್ದರೆ ಅದು ಒಳ್ಳೆಯ ಭಾವನೆ; ಹಿಂದಿನವರು ಮಾಡಿದ್ದು ಸರಿಯಾಯಿತು ಎಂದು ನಾನು ತಿಳಿದುಕೊಂಡಿದ್ದೇನೆ. ಮತ್ತೆ ಕಾರು ಎಲ್ಲಿದೆ ಎಂದು ಮಾನ್ಯ ಸದಸ್ಯರು ಕೇಳಿದ್ದಾರೆ. ಆ ಕಾರನ್ನು ಪ್ರಧಾನ ಮಂತ್ರಿಗಳು ಬಂದಾಗ ಮತ್ತು ವಿದೇಶಿ ಅತಿಥಿಗಳು ಬಂದಾಗ ಉಪಯೋಗ ಮಾಡಲಿಕ್ಕೆ ಇಟ್ಟಿದ್ದೇವೆ. ಇವತ್ತು ಉದಾಹರಣೆಗೆ ರಷ್ಯಾ ದೇಶದ ಉಪಾಧ್ಯಕ್ಷರು ಇಲ್ಲಿಗೆ ಬಂದಿದ್ದಾರೆ ಅವರು ಆ ಕಾರನ್ನು ಉಪಯೋಗಿಸುತ್ತಿದ್ದಾರೆ. ಮೂರನೆಯ ಪ್ರಶ್ನೆ, ಸರಳತೆ ಮಂತ್ರಿಗಳಿಗೆ ಸೀಮಿತವಾಗಿದ್ದರೆ ಸಾಲದು. ಅದನ್ನು ಅಧಿಕಾರಿಗಳಿಗೂ ಹೇಳಬೇಕು ಎಂದು ಹೇಳಿದ್ದಾರೆ. ಅಧಿಕಾರಿಗಳು ತಮ್ಮ ವ್ಯವಹಾರದಲ್ಲಿ ಸರಳತೆಯನ್ನು ತೋರಿಸಬೇಕು ಎಂದು ನಾವು ನಿರೀಕ್ಷಣೆ ಮಾಡುತ್ತೇವೆ. ಅದರಂತೆ ನಾವು ಅವರಿಗೂ ಹೇಳಿದ್ದೇವೆ. ಈ ವಿದೇಶಿ ಕಾರುಗಳು ಕೆಲವು ಸಂದರ್ಭದಲ್ಲಿ ನಮಗೆ ಅಗತ್ಯವಾಗಿ ಬೇಕು. ನಿಮಿಷಗಳ ಮತ್ತು ಕಾರ್ಪೊರೇಷನ್‌ಗಳಿಗೆ ವಿದೇಶದಿಂದ ಅನೇಕ ಅತಿಥಿಗಳು ಬರುತ್ತಾರೆ: ಟೆಕ್ನಿಕಲ್ ಕೊಲ್ಯಾಬರೇಲಾರ್ಸ್ ಬರುತ್ತಾರೆ, ಅವರು ಬಂದಾಗ ಈ ಕಾರುಗಳನ್ನು ಉಪಯೋಗ ಮಾಡತಕ್ಕ ಅಗತ್ಯ ಬೀಳುತ್ತದೆ, ಇದರಿಂದ ಅವರಿಗೆ ಸಮಾಧಾನವಾಗುತ್ತದೆ ಮತ್ತು ನಮ್ಮ ಕೆಲಸಗಳೂ ಆಗ ಬಹುದು.

ಮಾನ್ಯ ಸದಸ್ಯರು.— ವಿದೇಶದವರಿಗೆ ತಮ್ಮ ದೇಶದ ಕಾರುಗಳಲ್ಲಿ ಕೂತರೆ ಮಾತ್ರ ಸಮಾಧಾನವಾಗುತ್ತದೆಂದು ಹೇಳಿದರು, ನಮ್ಮ ದೇಶದಲ್ಲಿ ತಯಾರಾದ ಕಾರುಗಳಲ್ಲಿ ಕೂತರೆ ಅವರಿಗೆ ಏಕೆ ಸಮಾಧಾನವಾಗುವುದಿಲ್ಲ : —

ಶ್ರೀ ರಾಮಕೃಷ್ಣ ಹೆಗಡೆ.— ಅದನ್ನ ಅವರಿಗೆ ಕೇಳಬೇಕು:—

ವಿಷಯ : ಹೊಸ ತೆರಿಗೆಗಳನ್ನು ವಿಧಿಸುವುದು

ಪ್ರ. 111(49) ಶ್ರೀ ವಿ. ರಾಮದೇವ್ (ಮಲ್ಲೇಶ್ವರಂ).— ಮಾನ್ಯ ಮುಖ್ಯ ಮಂತ್ರಿಗಳು ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ. ಈ ಸಾಲಿನ ಆಯವ್ಯಯದಲ್ಲಿ ಪ್ರೋತಾ ಹಣವನ್ನು ತುಂಬಲು ಸರಕಾರದವರು ಕೈಕೊಂಡ ಕ್ರಮಗಳೇನು ;

ಆ. ಆ ಕ್ರಮಗಳಿಂದ ಭರ್ತಿ ಆಗುವ ಹಣವೆಷ್ಟು ;

ಇ. ಈ ಕ್ರಮಗಳಲ್ಲಿ ಯಾವುದಾದರೂ ಹೊಸ ತೆರಿಗೆ ಹಾಕುವ ಯೋಜನೆ ಇದೆಯೇ :—

ಶ್ರೀ ರಾಮಕೃಷ್ಣ ಹೆಗಡೆ (ಮುಖ್ಯಮಂತ್ರಿ) :—